ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ)106(104)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಂಗಳೂರು ನಗರದ ಬಡವರಿಗೆ ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹೌದಾದಲ್ಲಿ ಎಷ್ಟು, ಎಲ್ಲೆಲ್ಲಿ ಮನೆಗಳನ್ನು ನಿಮಿಸಲಾಗುವುದು? ಮತ್ತು ಇದಕ್ಕಾಗಿ ಎಲ್ಲಿ ಸ್ಥಳ ಗುರುತಿಸಲಾಗಿದೆ;

ಇ) ಬಡವರನ್ನು ಯಾವ ರೀತಿ ಗುರುತಿಸಲಾಗುವುದು;

ಈ) ಇದಕ್ಕೆ ಮಂಜೂರಾದ ಅನುದಾನ ಎಷ್ಟು ಮತ್ತು ವೆಚ್ಚವಾದ ಹಣ ಎಷ್ಟು (ವಿವರ ನೀಡುವುದು)?

ಶ್ರೀ ಡಿ.ಟಿ.ಜಯಕುಮಾರ್

ಅ)ಹೌದು

ಆ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಪ್ರದೇಶಗಳಲ್ಲಿ ನಗರ ಆಶ್ರಯ ಯೋಜನೆಯಡಿ ಒಟ್ಟು 4032 ಮನೆಗಳನ್ನು ನೀಡಿದ್ದು 2838 ಮನೆಗಳನ್ನು ನಿರ್ಮಿಸಲಾಗಿದ್ದು 519 ಮನೆಗಳು ಪ್ರಗತಿಯಲ್ಲಿರುತ್ತವೆ.

ನಗರ ಪ್ರದೇಶಗಳು	ಸುರಿ	ಪೂರ್ಣ ಗೊಂಡ ಮನೆ	ಪ್ರಗತಿ ಯಲ್ಲಿರುವ ಮನೆಗಳು	ಪ್ರಾರಂಭ ವಾಗದ ಮನೆಗಳು	ಒಟ್ಟು ಬೇಕಾದ ಅನುದಾನ	ಒಟ್ಟು ಬಿಡುಗಡೆಯಾದ ಅನುದಾನ	ಒಟ್ಟು ವಿಚ್ಛಾದ ಅನುದಾನ
ಆನೇಕಲ್ TMC	814	528	106	180	203.500	180.470	150.395
ಬೆಂಗಳೂರು CC	130	120	0	10	32.500	30.000	30.000
ಬೊಮ್ಮನಹಳ್ಳಿ CMC	35	35	0	0	8.750	8.750	8.750
ಬ್ಯಾಟರಾಯನಪುರ CMC	397	282	75	40	99.250	77.350	88.428
ದಾಸರಹಳ್ಳಿ CMC	289	0	0	289	72.250	0.000	0.000
ಹೆಂಗೇರಿ TMC	763	763	0	01	90.750	202.530	190.750
ಕೃಷ್ಣರಾಜಪುರ CMC	83	73	0	10	20.750	19.250	18.250
ಮಹದೇವಪುರ CMC	987	555	307	125	246.750	256.250	171.806
ರಾಜರಾಜೇಶ್ವರಿ CMC	130	125	5	0	32.500	20.750	31.976
ಯಲಹಂಕ CMC	404	357	26	21	101.000	118.710	90.602
ಒಟ್ಟು	**4032**	**2838**	**519**	**675**	**1008.000**	**914.06**	**780.956**

ಇ)ಬೆಂಗಳೂರು ನಗರದಲ್ಲಿರುವ ವಸತಿ ರಹಿತ ಬಡವರನ್ನು ಗುರುತಿಸುವ ಸಲುವಾಗಿ ನಗರ ಆಶ್ರಯ ಸಮಿತಿಯನ್ನು ರಚಿಸಲಾಗಿದ್ದು, ಆದೇಶ ಸಂಖ್ಯೆ ; ವಇ 1 ಹೆಚ್ಎಎಂ 2004 ಬೆಂಗಳೂರು ದಿನಾಂಕ;03–03–2004ರ ಆದೇಶದಲ್ಲಿ ತಿಳಿಸಿದ್ದು ಇದಕ್ಕಾಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನ ಜಾರಿಯಲ್ಲಿರುತ್ತದೆ.

ಈ)'ಆ' ದಲ್ಲಿ ಉತ್ತರಿಸಿದಂತೆ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ)107(105)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಗೆ ಮಂಜೂರಾಗಿರುವ ಒಟ್ಟು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು?

ಆ) ಇವರನ್ನು ಯಾವ ರೀತಿ ಭರ್ತಿ ಮಾಡಿಕೊಳ್ಳಲಾಗುತ್ತಿದೆ;

ಇ) ಇವರಲ್ಲಿ ಬೇರೆ ಇಲಾಖೆಯಿಂದ ಎರವಲು ಸೇವೆ ಮೇಲೆ ಜಿಲ್ಲಾ ಪಂಚಾಯಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಯೇ;

ಈ) ಇದರಿಂದ ಮೂಲ ಇಲಾಖೆಗೆ ತೊಂದರೆಯಾಗುತ್ತಿಲ್ಲವೇ;

ಉ) ಎರವಲು ಸೇವೆಯಲ್ಲಿದ್ದ ಮೂಲ ಇಲಾಖೆಯವರು ವಾಪಾಸ್ಸು ಕಳುಹಿಸಲು ಆದೇಶಿಸಿದರೆ, ಇವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವ ಅಧಿಕಾರ ಜಿಲ್ಲಾ ಪಂಚಾಯತಿಗೆ ಇದೆಯೇ;

ಊ) ಇಲ್ಲವಾದರೆ, ಸರ್ಕಾರಿ ಆದೇಶದ ಉಲ್ಲಂಘನೆ ಯಾಗಿರುವು ದಲ್ಲವೇ?